**ಓ.ಎಸ್. – 198/2024**

**ಪಿ.ಡಬ್ಲೂ – 1**

**ಸಾಕ್ಷಿಯನ್ನು ದಿಃ 06.03.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್.ಹೆಚ್.ಬಿ. ವಕೀಲರಿಂದ**

1. ನನ್ನ ತಂದೆಯ ಹೆಸರು ತಿಂಬಳಿ ಮಂಜಪ್ಪ. ನನ್ನ ತಂದೆಯ ಹೆಸರು ಕಿಂಬಳ್ಳಿ ಮಂಜಪ್ಪ ಅಲ್ಲ ಎಂದರೆ ಸಾಕ್ಷಿಯು ದಾಖಲೆಗಳಲ್ಲಿ ತಪ್ಪಾಗಿ ಕಿಂಬಳ್ಳಿ ಮಂಜಪ್ಪ ಎಂದು ದಾಖಲಾಗಿರುತ್ತದೆ ಎಂದು ನುಡಿಯುತ್ತಾರೆ. ಕಿಂಬಳ್ಳಿ ಯನ್ನು ತಿಂಬಳಿ ಎಂದು ತಿದ್ದುಪಡಿ ಮಾಡುವುದಕ್ಕಾಗಿ ಸೂಕ್ತ ಪ್ರಾಧಿಕಾರಕ್ಕೆ ನಾವು ಯಾವುದೇ ಅರ್ಜಿಯನ್ನು ನೀಡಿರುವುದಿಲ್ಲ. ತಿಂಬಳಿ ಮತ್ತು ಕಿಂಬಳ್ಳಿ ಎಂಬುದು ಆಯಾ ಮನೆತನಗಳ ಹೆಸರು ಎಂದರೆ ಸರಿ. ಕಿಂಬಳ್ಳಿ ಮಂಜಪ್ಪ ಎಂಬ ವ್ಯಕ್ತಿ ಬೇರೆ ಒಬ್ಬ ವ್ಯಕ್ತಿ ಇರಬಹುದು ಎಂದರೆ ಸರಿಯಲ್ಲ. ಕಿಂಬಳ್ಳಿ ಮಂಜಪ್ಪ ಎಂಬ ಹೆಸರನ್ನು ತಿಂಬಳಿ ಮಂಜಪ್ಪ ಎಂದು ತಿದ್ದುಪಡಿ ಮಾಡುವಂತೆ ಕೋರಿ ಸೂಕ್ತ ಪ್ರಾಧಿಕಾರದ ಮುಂದೆ ಕೇಳಿಕೊಂಡಿರುತ್ತೇವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

2. ಆಧಾರ್ ಕಾರ್ಡ್ ಅನ್ನು ಪಡೆದೇ ಖಾತೆ ಪಹಣಿಯನ್ನು ನಮೂದಿಸುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನ ಹದ್ದುಬಸ್ತು ಆಗಿರುವುದಿಲ್ಲ. ಹದ್ದುಬಸ್ತು ಆಗದೇ ಯಾರ ಸ್ವತ್ತು ಎಂದು ಗುರುತಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ನನ್ನ ಜಮೀನಿನ ಪಕ್ಕದಲ್ಲಿ ಬಗರ್ ಹುಕುಂ ಅಡಿಯಲ್ಲಿ ಸಾಗುವಳಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಕೆರೆ ಒತ್ತುವರಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಆಸ್ಪತ್ರೆಯಲ್ಲಿ ದಾಖಲಾಗಿ ದೂರನ್ನು ನೀಡಿದಾಗ ನನಗೆ ಚಿಕಿತ್ಸೆಯನ್ನು ನೀಡಿದ ವೈದ್ಯರು ನನಗೆ ಯಾವುದೇ ಹೊಡೆತವು ಬಿದ್ದಿಲ್ಲ ಎಂದು ವರದಿಯನ್ನು ನೀಡಿರುತ್ತಾರೆ ಎಂದರೆ ಸರಿ. ದೂರನ್ನು ನಮ್ಮ ವಕೀಲರು ಬರೆದುಕೊಟ್ಟಿದ್ದಾರೆಂದು ಕ್ರಿಮಿನಲ್ ಪ್ರಕರಣದ ಸಾಕ್ಷ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ.

3. ಕಬ್ಬಿಣದ ಗೇಟನ್ನು ಖರೀದಿಸಿರುವುದಕ್ಕೆ ಸಂಬಂಧಿಸಿದ ಬಿಲ್ ನನ್ನ ಬಳಿ ಇರುವುದಿಲ್ಲ. ಮುಳ್ಳು ತಂತಿ ಬೇಲಿ ಮತ್ತು ಕಂಬಗಳನ್ನು ಪೊಲೀಸರು ಜಪ್ತುಪಡಿಸಿಕೊಂಡಿರುವುದಿಲ್ಲ. ಪೊಲೀಸರು ಸ್ಥಳದಲ್ಲಿ ಮಹಜರ್ ಮಾಡಿರುತ್ತಾರೆ. ನಷ್ಟದ ಕುರಿತು ಮಹಜರ್ ನಲ್ಲಿ ನಮೂದು ಮಾಡಿರುವುದಿಲ್ಲ.

ಪೊಲೀಸರು ಠಾಣೆಗೆ ಕರೆಸಿ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ದೊಡ್ಡ ಕಾಡು ಮರಗಳು ಇರಲಿಲ್ಲ, ಪೊದೆಗಳು ಇದ್ದವು, ಅವುಗಳನ್ನು ಜೆ ಸಿ ಬಿ ಮೂಲಕ ಸ್ವಚ್ಛ ಮಾಡಿಸುತ್ತಿದ್ದೆ. ದಾವಾ ಸ್ವತ್ತಿನಲ್ಲಿ ನಾನು ಯಾವುದೇ ಸಾಗುವಳಿಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನನಗೆ ದಾವಾ ಸ್ವತ್ತಿನಲ್ಲಿ ಸಾಗುವಳಿ ಮಾಡಲು ಬಿಟ್ಟಿರುವುದಿಲ್ಲ. ಪ್ರತಿವಾದಿ ನನಗೆ ದಾವಾ ಸ್ವತ್ತಿನಲ್ಲಿ 2 ವರ್ಷಗಳಿಂದ ಸಾಗುವಳಿ ಮಾಡಲು ಬಿಟ್ಟಿರುವುದಿಲ್ಲ. ಸಾಕ್ಷಿಯು ಮುಂದುವರೆದು ಕೆಲಸ ಮಾಡಲು ಬಿಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ 10 ರಿಂದ 12 ನಾವು ತೆಗೆದಿರುವ ಛಾಯಾಚಿತ್ರಗಳು.

4. ನಿಪಿ 10 ರಿಂದ 12 ರಲ್ಲಿ ಗೇಟನ್ನು ನಿಲ್ಲಿಸಿದ ಬಗ್ಗೆ ಮತ್ತು ಕಿತ್ತ ಬಗ್ಗೆ ಕುರುಹು ಇಲ್ಲ ಎಂದರೆ ಸರಿಯಲ್ಲ. ನಿಪಿ 10 ರಿಂದ 12 ರಲ್ಲಿ ಕಾಣುತ್ತಿರುವ ಜಮೀನಿನಲ್ಲಿ ಯಾವುದೇ ಬೆಳೆ ಕಂಡು ಬಂದಿರುವುದಿಲ್ಲ ಎಂದರೆ ಸರಿ. ಬಗರ್ ಹುಕುಂ ಸಮಿತಿಯವರಿಗೆ ಮಂಜೂರಾತಿ ಕೋರಿ ಸಲ್ಲಿಸಿದ ಅರ್ಜಿಯಲ್ಲಿ ತಿಂಬಳಿ ಮಂಜಪ್ಪ ಎಂಬ ಹೆಸರಿನ ಉಲ್ಲೇಖ ಇದೆ ಎಂದರೆ ಸರಿ. ಸರ್ವೇ ಸಂಖ್ಯೆ 9 ರ ಕೆರೆಯ ನೀರನ್ನು ಜಾನುವಾರಗಳು ಕುಡಿಯಲು ಹೋಗದಂತೆ ಬೇಲಿ ಮತ್ತು ಗೇಟನ್ನು ಕಟ್ಟಿ ತಡೆ ಹಿಡಿದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಜಮೀನಿನ ಪೂರ್ವದ ಕಡೆಗೆ ಕೆರೆ ಬರುತ್ತದೆ. ಕೆರೆಯ ಸುತ್ತಲೂ ದಟ್ಟವಾದ ಹುಲ್ಲು ಬೆಳೆದಿದೆ, ಜಾನುವಾರುಗಳು ಅಲ್ಲಿ ಹುಲ್ಲನ್ನು ಮೇಯಲು ಹೋಗುವುದಿಲ್ಲ ಎಂದರೆ ಸಾಕ್ಷಿಯು ಕೆರೆಯನ್ನು ಒತ್ತು ವರಿ ಮಾಡಿರುವುದರಿಂದ ಜಾನುವಾರುಗಳಿಗೆ ಅಲ್ಲಿಗೆ ಹೋಗಲು ಅವಕಾಶ ಇಲ್ಲ ಎಂದು ನುಡಿಯುತ್ತಾರೆ.

5. ದಾವಾ ಸ್ವತ್ತಿನಲ್ಲಿ ನಾನು ಸಾಗುವಳಿ ಮಾಡದೇ ಕಲ್ಲಿನ ಗಣಿಗಾರಿಕೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಕಲ್ಲು ಗಣಿಗಾರಿಕೆ ಮಾಡುವ ಸಲುವಾಗಿ ಜಾನುವಾರುಗಳು ಕೆರೆಗೆ ಹೋಗಿ ನೀರನ್ನು ಕುಡಿಯದಂತೆ ದಾರಿಯನ್ನು ಮುಚ್ಚಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಜಂಬಿಟ್ಟಿಗೆ ದೊರೆಯುವ ಜಾಗ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಕಲ್ಲಿನ ಗಣಿಗಾರಿಕೆ ನಡೆಸಲು ಜೆ ಸಿ ಬಿ ಯನ್ನು ನಾನು ಕರೆಸಿದ ಕಾರಣ ಊರಿನವರು ಅದನ್ನು ತಡೆದಿರುತ್ತಾರೆ ಎಂದರೆ ಸರಿಯಲ್ಲ. ಜಾನುವಾರಗಳಿಗೆ ಕೆರೆಯಲ್ಲಿ ನೀರು ಕುಡಿಯಲು ಅವಕಾಶ ಮಾಡಿಕೊಡುವಂತೆ ಗ್ರಾಮದ ಜನರು ಬುದ್ಧಿ ಹೇಳಿದರೂ ಸಹ ನಾನು ಕೇಳದೇ ತೊಂದರೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಯಾವುದೇ ಬೆಳೆಯ ಸಾಗುವಳಿಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಕಲ್ಲಿನ ಗಣಿಗಾರಿಕೆ ನಡೆಸುವ ಸಲುವಾಗಿ ದಾವಾ ಸ್ವತ್ತನ್ನು ಮಂಜೂರು ಮಾಡಿಸಿಕೊಂಡು ಅಕ್ರಮವಾಗಿ ಕಲ್ಲಿನ ಗಣಿಗಾರಿಕೆ ನಡೆಸುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ28.06.2024 ರಂದು ನಾನು ನೀಡಿರುವ ದೂರು ಸುಳ್ಳಿನ ದೂರು ಎಂದರೆ ಸರಿಯಲ್ಲ. ಸುಳ್ಳು ದೂರನ್ನು ನೀಡಿದರೆ ಅಕ್ರಮ ಗಣಿಗಾರಿಕೆಗೆ ಸಹಾಯವಾಗುತ್ತದೆಂದು ಮೊದಲು ದೂರನ್ನು ಬರೆಸಿಕೊಂಡು ನಂತರ ಆಸ್ಪತ್ರೆಗೆ ಹೋಗಿ ದಾಖಲಾಗಿರುತ್ತೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ವೈದ್ಯರು ನನಗೆ ಯಾವುದೇ ಗಾಯಗಳು ಆಗಿಲ್ಲ ಎಂದು ತಿಳಿಸಿದರು ಎಂದರೆ ಸರಿಯಲ್ಲ. ಪೊಲೀಸರ ಮೇಲೆ ಪ್ರಭಾವ ಬೀರಿ ಸುಳ್ಳು ಪ್ರಕರಣ ದಾಖಲಾಗುವಂತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪದೇ ಪದೇ ಪೊಲೀಸ್ ಠಾಣೆಗೆ ಹೋಗಿ ಸುಳ್ಳು ದೂರನ್ನು ನೀಡುವ ಹವ್ಯಾಸವನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.ನಾನು 4 ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ.

**ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ